**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *16.03.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

. ಆ ದಿನ ಘಟನೆ ಕಾಲಕ್ಕೆ ಆರೋಪಿತ ಹಾಕಿಕೊಂಡಿದ್ದ ಬಟ್ಟೆಗಳನ್ನು ನಾನು ನೋಡಿರಲಿಲ್ಲ. ಆ ದಿನ ಟಿ.ಶರ್ಟ್ ಹಾಕಿಕೊಂಡಿದ್ದನ್ನು ನಾನು ನೋಡಿದ್ದೆ ಆದರೆ ಬಣ್ಣ ಯಾವುದೆಂದು ಹೇಳಲು ಆಗುವುದಿಲ್ಲ.

**ಈ ಹಂತದಲ್ಲಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರಿಂದಃ**

*2.* ಆ ದಿನ ಘಟನೆ ಕಾಲಕ್ಕೆ ಆರೋಪಿತ ಈಗ ನನಗೆ ತೋರಿಸುತ್ತಿರುವ ಸಿಮೆಂಟ್ ಬಣ್ಣದ ಅರ್ಧ ತೋಳಿನ ಟಿ.ಶರ್ಟ್ ಮತ್ತು ಕಪ್ಪು ಬಣ್ಣದ ಜಾಗಿಂಗ್ ಪ್ಯಾಂಟ್ ಧರಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಆ ಬಟ್ಟೆಗಳನ್ನು ಹಾಕಿದ್ದನ್ನು ನೋಡಿದ್ದರು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ಆ ದಿನ ಗಾಬರಿಯಲ್ಲಿ ಬಟ್ಟೆಗಳನ್ನು ನೋಡಿರಲಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ**

3. ನಾನು ಎಂ.ಬಿ.ಎ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 2021 ರಲ್ಲಿ ಎಂ.ಬಿ.ಎ ಪದವಿ ಮುಗಿದಿದೆ. ದಿಃ08.01.2006 ರಂದು ನನ್ನ ತಂದೆ ಮರಣಹೊಂದಿದ್ದರು. ನನ್ನ ತಂದೆಗೆ ನಾವು 3

ಜನ ಮಕ್ಕಳು. ನಾನು ಕೊನೆಯವನು. ನನ್ನ ತಂದೆ ಮರಣದ ಕಾಲಕ್ಕೆ ನಾವು ಅಗ್ರಹಾರದಲ್ಲಿ ವಾಸವಿದ್ದೇವು. ನನ್ನ ತಂದೆ ತನ್ನ ಸ್ವಂತ ಕಾರನ್ನು ಟೂರ್ಸ್ ಅಂಡ್ ಟ್ರಾವೆಲ್ಸ್ ನ ಜೊತೆ ಪಾಲುದಾರಿಕೆಯಲ್ಲಿ ಓಡಿಸುತ್ತಿದ್ದರು. ನನ್ನ ತಂದೆ ಬಳಿ ಅಂಬಾಸಿಡರ್ ಕಾರ್ ಇತ್ತು. ಆ ಕಾರ್ ಯಾರ ಹೆಸರಿನಲ್ಲಿತ್ತು ಎಂದು ಗೊತ್ತಿಲ್ಲ. ನನ್ನ ತಂದೆ ಮದ್ಯಪಾನ ಮಾಡುತ್ತಿದುದ್ದರಿಂದ ಯಾವಾಗಲು ಕೆಮ್ಮುತ್ತಿದ್ದರು ಆದರೆ ಎಷ್ಟು ವರ್ಷಗಳಿಂದ ಅನಾರೋಗ್ಯ ಇತ್ತು ಎಂದು ನಿಖರವಾಗಿ ಗೊತ್ತಿಲ್ಲ. ನನ್ನ ತಂದೆ ಮರಣಹೊಂದುವ ಮೊದಲು ಎಷ್ಟು ದಿನಗಳ ವರೆಗೆ ಹಾಸಿಗೆ ಹಿಡಿದಿದ್ದರು ಎಂದು ನಾನು 6 ನೇ ತರಗತಿ ಓದುತ್ತಿದ್ದರಿಂದ ನಿಖರವಾಗಿ ಗೊತ್ತಿಲ್ಲ. ನನ್ನ ತಂದೆಗೆ ಕಿಡ್ನಿ ಸಮಸ್ಯೆ ಇತ್ತು ಎಂದರೆ ನಿಜ. ಆ ಕಾರಣಕ್ಕೆ ನನ್ನ ತಂದೆ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ನಿಜ. ಅನಾರೋಗ್ಯದ ಕಾರಣಕ್ಕೆ ಅವರಿಗೆ ಹೆಚ್ಚು ಕೆಲಸ ಮಾಡಲು ಆಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರು ಎಷ್ಟು ದಿನ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಗೊತ್ತಿಲ್ಲ.

***4.*** ನನ್ನ ತಂದೆ ಟೂರ್ಸ್ ಅಂಡ್ ಟ್ರಾವೆಲ್ಸ್ ನ ಪಾಲುದಾರರು ಇದ್ದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ಹುಟ್ಟಿದಾಗಿನಿಂದಲೂ ನನ್ನ ತಂದೆ ತನ್ನ ಕಾರನ್ನು ಓಡಿಸುತ್ತಿದ್ದರು. ನಮ್ಮ ಮನೆಯಲ್ಲಿ ನಮ್ಮ ತಂದೆ ಒಬ್ಬರೇ ದುಡಿಯುವ ವ್ಯಕ್ತಿ ಆಗಿದ್ದರು ಎಂದರೆ ನಿಜ. ನಾವು 3 ಜನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದೇವು ಎಂದರೆ ನಿಜ. ನನ್ನ ತಂದೆ ಅತಿ ಹೆಚ್ಚು ಮದ್ಯಪಾನ ಮಾಡುತ್ತಿದ್ದರಿಂದ ಸಾಯುವ ಮೊದಲು 3-4 ವರ್ಷಗಳಿಂದ ಅವರಿಗೆ ಅತಿಯಾದ ಆರೋಗ್ಯ ಸಮಸ್ಯೆ ಇತ್ತು ಎಂದರೆ ನಿಜ. ನನ್ನ ತಂದೆ ಟೂರ್ಸ್ ಅಂಡ್ ಟ್ರಾವೆಲ್ಸ್ ನಲ್ಲಿ ಪಾಲುದಾರರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ದಿನಕ್ಕೆ ಅಥವಾ ತಿಂಗಳಿಗೆ ಎಷ್ಟು ಆದಾಯ ಬರುತ್ತಿತ್ತು ಎಂದು

ನನಗೆ ಗೊತ್ತಿಲ್ಲ. ನಾವು ಅಗ್ರಹಾರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇವು ಎಂದರೆ ನಿಜ. ಆ ಮನೆಗೆ ಎಷ್ಟು ಬಾಡಿಗೆ ಕೊಡುತ್ತಿದ್ದೇವು ಎಂದು ಗೊತ್ತಿಲ್ಲ.

5. ನನಗೆ ಬುದ್ದಿ ಬಂದಾಗಿನಿಂದಲೂ ಮೃತ ಶಿವಪ್ರಕಾಶ್ ಇವರ ಪರಿಚಯ ಇತ್ತು ಮತ್ತು ನನ್ನ ತಂದೆ ಇರುವಾಗಿನಿಂದಲೂ ಅವರು ನಮ್ಮ ಮನೆಗೆ ಬರುತ್ತಿದ್ದರು. ನನ್ನ ತಂದೆ ಸಾಯುವ ಎಷ್ಟು ವರ್ಷಗಳ ಮೊದಲಿನಿಂದ ನನಗೆ ಶಿವಪ್ರಕಾಶ್ ಇವರ ಪರಿಚಯ ಇತ್ತು ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ಈಗ ಅಂದಾಜು 22 ವರ್ಷಗಳ ಹಿಂದಿನಿಂದ ನನಗೆ ಶಿವಪ್ರಕಾಶ್ ಇವರ ಪರಿಚಯ ಇತ್ತು. ನನ್ನ ತಂದೆ ಯಾವ ಬ್ಯಾಂಕ್ ನಲ್ಲಿ ಅಕೌಂಟ್ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಮರಣದ ಬಳಿಕ ನಮಗೆ ಬ್ಯಾಂಕ್ ಅಥವಾ ಇನ್ಷೂರೆನ್ಸ್ ನಿಂದ ಯಾವುದೇ ಹಣ ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಆಸ್ಪತ್ರೆಯಲ್ಲಿದ್ದಾಗ ಮತ್ತು ನಮ್ಮ ತಂದೆ ಮರಣ ಹೊಂದಿದ ಬಳಿಕ ಶಿವಪ್ರಕಾಶ್ ಇವರು ನಮ್ಮ ಜೊತೆಯಲ್ಲೇ ಇದ್ದರು ಮತ್ತು ಮರಣದ ನಂತರದ ಕಾರ್ಯಕ್ರಮಗಳನ್ನು ಮಾಡಿದ್ದರು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಕಾಲಕ್ಕೆ ನಮ್ಮ ಅಜ್ಜಿ ಸಹ ಇದ್ದರು. ನನ್ನ ತಂದೆ ಶಿವಪ್ರಕಾಶ್ ಇವರಿಗೆ ನನ್ನ ಮಕ್ಕಳ ಜವಾಬ್ದಾರಿಯನ್ನು ನೋಡಿಕೊಳ್ಳಬೇಕು ಎಂದು ಹೇಳಿದ್ದರಿಂದ ಅವರು ನೋಡಿಕೊಳ್ಳತ್ತಿದ್ದರು. ನಮ್ಮ ತಂದೆಯ ಮರಣದ ಬಳಿಕ ನಮ್ಮ ಕುಟುಂಬಕ್ಕೆ ಆದಾಯದ ಕೊರತೆಯಾಗಿತ್ತು ಎಂದರೆ ನಿಜ. ನನ್ನ ಮೊದಲ ಅಕ್ಕನಿಗೆ *2014* ರಲ್ಲಿ ಮದುವೆಯಾಗಿದೆ. ಆ ಮದುವೆಗಿಂತ ನಮ್ಮೆಲ್ಲರ ವಿದ್ಯಾಭ್ಯಾಸ ಖರ್ಚನ್ನು ಶಿವಪ್ರಕಾಶ್ ಇವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ನಟರಾಜ ಕಾನ್ವೆಂಟ್, ಅಗ್ರಹಾರದಲ್ಲಿ ಓದಿದ್ದೇನೆ. ನನ್ನ ಅಕ್ಕಂದಿರು

ಶ್ರೀಕಾಂತ ಶಾಲೆಯಲ್ಲಿ ಓದಿದ್ದಾರೆ. ನಾನು ಓದಿದ್ದು ಖಾಸಗಿ ಶಾಲೆ ಆದರೆ ನನ್ನ ಅಕ್ಕಂದಿರು ಓದಿದ್ದು ಸರ್ಕಾರಿ ಶಾಲೆ ಇರುತ್ತದೆ. ನನ್ನ ಅಕ್ಕಂದಿರು ಓದಿದ್ದು ಸಹ ಖಾಸಗಿ ಶಾಲೆ ಎಂದರೆ ಸರಿಯಲ್ಲ.

*6.* ನನ್ನ ತಂದೆ ಮರಣಹೊಂದುವ ಕಾಲಕ್ಕೆ ನಮ್ಮ ಮನೆಯಲ್ಲಿ ಹಣ ಇಟ್ಟಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮರಣದ ಬಳಿಕವೂ ಸಹ ಶಿವಪ್ರಕಾಶ್ ಇವರು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು ಎಂದರೆ ನಿಜ. ಶಿವಪ್ರಕಾಶ್ ಇವರನ್ನು ಹೊರತು ಪಡಿಸಿ ಅವರ ಮನೆಯ ಬೇರೆ ವ್ಯಕ್ತಿಗಳು ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ನಿಜ. ನಾನು ಮತ್ತು ನನ್ನ ಮನೆಯವರು ಯಾರು ಸಹ ಶಿವಪ್ರಕಾಶ್ ಇವರ ಮನೆಗೆ ಹೊಗುತ್ತಿರಲಿಲ್ಲ ಎಂದರೆ ನಿಜ. ನಮ್ಮ ಕುಟುಂಬದ ಅಥವಾ ಅವರ ಕುಟುಂಬದ ಕಾರ್ಯಕ್ರಮ ಮತ್ತು ಹಬ್ಬ ಹರಿದಿನಗಳಲ್ಲಿ ನಾವು ಪರಸ್ಪರ ಭಾಗವಹಿಸುತ್ತಿರಲಿಲ್ಲ ಎಂದರೆ ನಿಜ. ನಾನು ಶಿವಪ್ರಕಾಶ್ ಹೆಂಡತಿ ಮತ್ತು ಮಕ್ಕಳನ್ನು ಯಾವತ್ತು ಖುದ್ದಾಗಿ ನೋಡಿರಲಿಲ್ಲ ಎಂದರೆ ನಿಜ. ಶ್ರೀನಗರದಲ್ಲಿ ನಾವು ವಾಸವಿರುವ ಮನೆಯ ನಿವೇಶನವನ್ನು ಶಿವಪ್ರಕಾಶ್ ಅವರೇ ಖರೀದಿ ಮಾಡಿದ್ದರು ಎಂದರೆ ನಿಜ. ಅವರು ಎಷ್ಟು ಹಣಕ್ಕೆ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಅದನ್ನು 4 ವರ್ಷಗಳ ಹಿಂದೆ ನನ್ನ ತಾಯಿಯ ಹೆಸರಿಗೆ ಮಾಡಿಸಿದ್ದರು. ನನ್ನ ತಂದೆ 4 ಲಕ್ಷ ರೂಪಾಯಿಗಳನ್ನು ಶಿವಪ್ರಕಾಶ್ ಇವರ ಬಳಿ ಇಟ್ಟ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ನನ್ನ ತಂದೆಗೆ 4 ಲಕ್ಷ ರೂಪಾಯಿಗಳನ್ನು ಶಿವಪ್ರಕಾಶ್ ಅವರಿಗೆ ಕೊಡುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿಗೆ 9 ಲಕ್ಷ ರೂಪಾಯಿಗೆ ಕ್ರಯ ಪತ್ರ ಆಗಿತ್ತು. ಆ ಕ್ರಯ ಪತ್ರದ ಕಾಲಕ್ಕೆ ನಾನು ಮತ್ತು ನನ್ನ ಭಾವ ತಲಾ 2 ಲಕ್ಷ ರೂಪಾಯಿ ಕೊಟ್ಟಿದ್ದೇವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಶ್ರೀನಗರದ ಮನೆ ಕಟ್ಟಲು 15 ಲಕ್ಷ ರೂಪಾಯಿ ಹಣ ಖರ್ಚಾಗಿದೆ. ನಾವು ಕೊಟ್ಟ ಸ್ವಲ್ಪ ಹಣ ಮತ್ತು ಅವರ ಸ್ವಲ್ಪ ಹಣದಿಂದ ಶಿವಪ್ರಕಾಶ್ ಇವರು ಮನೆ ಕಟ್ಟಿಸಿದ್ದರು. ಮನೆ ಕಟ್ಟಲು ನಾವು ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಮಾತು ಕೊಟ್ಟಿದ್ದರಿಂದ ಸ್ನೇಹಿತನ ಹೆಂಡತಿ ಮಕ್ಕಳು ಬೀದಿ ಪಾಲು ಆಗಬಾರದು ಎಂದ ಶಿವಪ್ರಕಾಶ್ ಇವರೇ ಹಣ ಖರ್ಚು ಮಾಡಿ ಮನೆ ಕಟ್ಟಿಸಿದ್ದರು ಎಂದರೆ ಸರಿಯಲ್ಲ. ***2021*** ಏಪ್ರಿಲ್ ನಲ್ಲಿ ಮನೆ ಪೂರ್ಣಗೊಂಡಿತ್ತು. ಮೇ ತಿಂಗಳಿನಲ್ಲಿ ಗೃಹಪ್ರವೇಶ ಮಾಡಿ ನಾವು ಅಗ್ರಹಾರದ ಮನೆಯಿಂದ ಶ್ರೀನಗರದ ಮನೆಗೆ ಹೋಗಿದ್ದೆವು. ಆ ಗೃಹಪ್ರವೇಶ ಕಾಲಕ್ಕೂ ಸಹ ಶಿವಪ್ರಕಾಶ್ ಇವರ ಮನೆಯವರು ಯಾರು ಬಂದಿರಲಿಲ್ಲ ಎಂದರೆ ನಿಜ. 2016 ಕಿಂತ ಮೊದಲು ನಾನು ಪಾರ್ಟ್ ಟೈಮ್ ಕೆಲಸ ಮಾಡುತ್ತಿದ್ದೆ 2016 ಜನವರಿಯಿಂದ ಫುಲ್ ಟೈಮ್ ಕೆಲಸ ಮಾಡುತ್ತಿದ್ದೇನೆ. ನಾನು ಬೆಳಗ್ಗೆ 8.30 ರಿಂದ 9 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ ಅಂದಾಜು 7 ಗಂಟೆಗೆ ಮನೆಗೆ ವಾಪಸ್ಸು ಬರುತ್ತೇನೆ. ಶಿವಪ್ರಕಾಶ್ ಇವರಿಗೆ ಬನ್ನೂರು ಬಳಿ ಇರುವ ಇಟ್ನ ಹಳ್ಳಿ ಗ್ರಾಮದಲ್ಲಿ ತೋಟ ಇತ್ತು ಎಂದರೆ ನನಗೆ ಗೊತ್ತಿಲ್ಲ. ಶಿವಪ್ರಕಾಶ್ ಇವರು eco sports ಕಾರ್ ನಲ್ಲಿ ಓಡಾಡುತ್ತಿದ್ದರು ಎಂದರೆ ನಿಜ. ಶಿವಪ್ರಕಾಶ್ ಇವರಿಗೆ ಜಮೀನು ಇತ್ತು ಎಂದು ಮಾತ್ರ ಗೊತ್ತಿದೆ ಆದರೆ ಎಲ್ಲೆಲ್ಲಿ ಇತ್ತು ಎಂದು ಗೊತ್ತಿಲ್ಲ. ಅವರು ತೋಟಕ್ಕೆ ಹೊಗುವಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

8. ಶಿವಪ್ರಕಾಶ್ ಇವರು ಟೂರ್ಸ್ ಅಂಡ್ ಟ್ರಾವೆಲ್ಸ್ ಇಟ್ಟುಕೊಂಡಿದ್ದರು ಎಂದರೆ ನಿಜ. ಅದಕ್ಕೂ ಮೊದಲು ಸೀಮೆಎಣ್ಣೆ ವ್ಯಾಪಾರ ಮಾಡುತ್ತಿದ್ದರು. ಅವರು ಫೈನಾನ್ಸ್ ಮತ್ತು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ನಿಜ. ಅವರು ಹಲವಾರು ಜನಕ್ಕೆ ಹಣ ಕೊಟ್ಟಿದ್ದು ಅದನ್ನು

ವಾಪಸ್ಸು ಕೊಡುತ್ತಿಲ್ಲ ಎಂದು ನಮ್ಮ ಮುಂದೆ ಚರ್ಚೆ ಮಾಡುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ಆ ಬಗ್ಗೆ ಫೋನ್ ನಲ್ಲಿ ಮಾತನಾಡುತ್ತಿದುದ್ದನ್ನು ಮತ್ತು ಬೇರೆಯವರಿಗೆ ಬೈಯುತ್ತಿದುದ್ದನ್ನು ಮಾತ್ರ ಕೇಳಿದ್ದೇನೆ. ಆ ರೀತಿ ಮಾತನಾಡುತ್ತಿದುದ್ದರಿಂದ ಹಲವಾರು ಜನ ಸಾಲಗಾರರು ಅವರಿಗೆ ಹಣ ವಾಪಸ್ಸು ಕೊಡುತ್ತಿಲ್ಲ ಎಂದು ನನಗೆ ಗೊತ್ತಾಗಿತ್ತು ಎಂದರೆ ನಿಜ. ಶಿವಪ್ರಕಾಶ್ ಇವರನ್ನು ನಾನು ವಾರದಲ್ಲಿ 3 ದಿನ ನೊಡುತ್ತಿದ್ದೆ. ಶಿವಪ್ರಕಾಶ್ ಇವರ ಟೂರ್ಸ್ ಅಂಡ್ ಟ್ರಾವೆಲ್ಸ್ ವ್ಯವಹಾರವನ್ನು ನನ್ನ ತಾಯಿಯ ತಮ್ಮ ಗುರುಮಲ್ಲಸ್ವಾಮಿ ಎನ್ನುವವರು ನೋಡಿಕೊಳ್ಳುತ್ತಿದ್ದರು. ಅವರ ಟೂರ್ಸ್ ಅಂಡ್ ಟ್ರಾವೆಲ್ಸ್ ಕಛೇರಿ ಕಾರ್ಪೊರೇಷನ್ ಹಿಂಭಾಗದಲ್ಲಿತ್ತು ಎಂದರೆ ನಿಜ. ಟೂರ್ಸ್ ಅಂಡ್ ಟ್ರಾವೆಲ್ಸ್ ನಲ್ಲಿ ಕಾರ್, ಆಟೋ ಮತ್ತು ಟೆಂಪೋ ಇದ್ದವು ಎಂದರೆ ನಿಜ. ಈಗ ನಾನು 6 ವರ್ಷಗಳಿಂದ ಮಣಪ್ಪುರಂ ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ.

9. ಈಗ ನಮ್ಮ ಮನೆಯ ಇರುವ ಶ್ರೀನಗರ ಬಡಾವಣೆ ಹೊಸ ಬಡಾವಣೆ ಎಂದರೆ ನಿಜ. ಆ ಕಾರಣ ಅಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳಿವೆ ಎಂದರೆ ನಿಜ. ಆ ಬಡಾವಣೆಯಲ್ಲಿ ಈಗಲೂ ಬೀದಿ ಲೈಟ್ ಗಳ ವ್ಯವಸ್ಥೆಯಾಗಿಲ್ಲ ಎಂದರೆ ನಿಜ. ನಮ್ಮ ಮನೆಯ ಎದುರುಗಡೆ ಅಂದಾಜು 1 ½ ಯಿಂದ 2 ಎಕರೆ ಖಾಲಿ ಜಾಗ ಇದೆ ಎಂದರೆ ನಿಜ. ನನ್ನ ತಾಯಿಯ ಮರಣದ ಕಾಲಕ್ಕೆ ನಮ್ಮ ಮನೆಯ ಎಡಭಾಗದಲ್ಲಿ ನಂಜಪ್ಪ ಇವರ ಕಟ್ಟಡದ ಕೆಲಸ ನಡೆದಿತ್ತು ಎಂದರೆ ನಿಜ. ನಮ್ಮ ಮನೆಯ ಪಕ್ಕದಲ್ಲಿ ಮೈಸೂರಿನಿಂದ ಕಡಕೋಳಕ್ಕೆ ಹೋಗುವ ರಸ್ತೆಯಿದೆ ಎಂದರೆ ನಿಜ. ಆ ರಸ್ತೆ ಹಲವಾರು ಹಳ್ಳಿಗಳಿಗೆ ಹೊಗುತ್ತದೆ ಎಂದರೆ ನಿಜ. ಮೈಸೂರಿಗೆ ಕೆಲಸಕ್ಕೆ ಬರುವ ಹಳ್ಳಿಯ ಜನರು ಅದೇ ರಸ್ತೆಯಲ್ಲಿ ಓಡಾಡುತ್ತಾರೆ ಎಂದರೆ ನಿಜ. ನಮ್ಮ ಮನೆಯಿಂದ ಸ್ವಲ್ಪ ಮುಂದೆ ರೈಲ್ವೇ ಗೇಟ್ ಚೆಕ್

ಪೋಸ್ಟ್ ಇದೆ ಎಂದರೆ ನಿಜ. ನಮ್ಮ ಮನೆಯ ಬಲಭಾಗ ಖಾಲಿ ಜಾಗ ಇದೆ. ನಮ್ಮ ಮನೆಯ ಎದುರಿಗಿರುವ ಖಾಲಿ ಜಾಗದ ಪಕ್ಕದಲ್ಲಿ ಶೀಟ್ ಗಳ ಶೆಡ್ ಇದೆ ಎಂದರೆ ನಿಜ. ಆ ಖಾಲಿ ಜಾಗದಿಂದ ಸ್ವಲ್ಪ ಮುಂದೆ ಹೋಗಿ ಎಡಕ್ಕೆ ಹೋದರೆ ಶಾರದಮ್ಮನ ಮನೆ ಎಂದರೆ ನಿಜ. ಈಗ ನಾನು ನೋಡುತ್ತಿರುವ ಪೊಟೋ ನಮ್ಮ ಮನೆಯ ಮುಂದಿನ ಖಾಲಿ ಜಾಗ ಮತ್ತು ಶೆಡ್ ನ ಮನೆ ಎಂದರೆ ನಿಜ. ಸಾಕ್ಷಿ ಒಪ್ಪಿದ್ದರಿಂದ ಸದರಿ ಪೊಟೋವನ್ನು ನಿ.ಡಿ–3 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಶೆಡ್ ಪಕ್ಕದಲ್ಲಿರುವ ರಸ್ತೆಯ ಮೂಲಕ ಶಾರದಮ್ಮನ ಮನೆಗೆ ಹೊಗಬೇಕು ಎಂದರೆ ನಿಜ. ಸಾಕ್ಷಿ ಒಪ್ಪಿದ್ದರಿಂದ ಸದರಿ ಪೊಟೋವನ್ನು ನಿ.ಡಿ–4 ಎಂದು ಗುರುತಿಸಿದೆ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಮನೆಗಳಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಹಿಂಭಾಗದಲ್ಲಿ ಬೇರೆ ಮನೆ ಇದೆ. ಶಾರದಮ್ಮನ ಮನೆ ಬಳಿ ನಿಂತರೇ ನಮ್ಮ ಮನೆಯ ಮುಂಭಾಗ ಕಾಣುವುದಿಲ್ಲ ಎಂದರೆ ನಿಜ. ನಮ್ಮ ಮನೆಯ ಮುಂಭಾಗ ನಿಂತರೇ ಶಾರದಮ್ಮನ ಮನೆಯ ಮುಂಭಾಗ ಕಾಣುವುದಿಲ್ಲ ಎಂದರೆ ನಿಜ.

10. ದಿಃ21.10.2021 ರಂದು ಬೆ.8.30 ಕ್ಕೆ ನಾನು ಕೆಲಸಕ್ಕೆ ಹೋಗಿದ್ದೆ. ಆ ದಿನ ನಾನು ಫೀಲ್ಡ್ ವರ್ಕ್ ಗೆ ಹೋಗಿದ್ದೆ.

**ಈ ವೇಳೆಗೆ ಊಟದ ಸಮಯವಾಗಿದ್ದರಿಂದ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು

**ದಿಃ*16.03.2024* ರಂದು ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ**

11. ಆ ದಿನ ನಾನು ಮೈಸೂರಿನಲ್ಲೇ ಫೀಲ್ಡ್ ವರ್ಕ್ ಗೆ ಹೋಗಿದ್ದೆ. ಆ ದಿನ ಸಂಜೆ 6.30 ಕ್ಕೆ ನನ್ನ ಕೆಲಸ ಮುಗಿದಿತ್ತು. ರಾತ್ರಿ 8.30 ಕ್ಕೆ ನಾನು ಮನೆಗೆ ಬಂದಿದ್ದೆ. ಮುಖ್ಯ ರಸ್ತೆಯಲ್ಲಿ ಓಡಾಡುವವರಿಗೆ ನಮ್ಮ ಮನೆ ಕಾಣುತ್ತದೆ ಎಂದರೆ ನಿಜ. ಆ ದಿನ ನಾನು ಮನೆಗೆ ಬಂದಾಗ ನನ್ನ ತಾಯಿ ಮತ್ತು ಶಿವಪ್ರಕಾಶ್ ಇವರು ಮನೆಯಲ್ಲಿದ್ದರು. ನಾನು ಬಂದಾಗ ಬಾಗಿಲು ತೆರೆದಿತ್ತು. ಆ ಕಾಲಕ್ಕೆ ಶಿವಪ್ರಕಾಶ್ ಇವರು 45 ನಿಮಿಷದಿಂದ 1 ಗಂಟೆವರೆಗೆ ಮನೆಯಲ್ಲಿದ್ದರು. ನಾನು ಮನೆ ಒಳಗೆ ಹೋಗಿ ಊಟ ಮಾಡಿದ ಬಳಿಕ ಮನೆಯ ಬಾಗಿಲು ಹಾಕಿದ್ದೆ. ಆ ದಿನ ರಾತ್ರಿ ಶಿವಪ್ರಕಾಶ್ ಇವರು ನಮ್ಮ ಮನೆಯಲ್ಲೆ ಊಟ ಮಾಡಿದ್ದರು. ರಾತ್ರಿ ವೇಳೆಯಲ್ಲಿ ರಸ್ತೆಯಲ್ಲಿ ನಿಂತಾಗ ನಮ್ಮ ಮನೆಯ ಮುಂದೆ ನಿಂತ ಜನ ಕಾಣುವುದಿಲ್ಲ ಎಂದರೆ ನಿಜ. ರಾತ್ರಿ 9.30 ಕ್ಕೆ ಶಿವಪ್ರಕಾಶ್ ಇವರು ನಮ್ಮ ಮನೆಯಿಂದ ಹೊರಗೆ ಹೋಗಿದ್ದರು. ಶಿವಪ್ರಕಾಶ್ ಇವರು ಮನೆಯಿಂದ ಹೊರಗೆ ಹೊಗಿ 5-10 ನಿಮಿಷಕ್ಕೆ ನನ್ನ ತಾಯಿ ನಾಯಿ ಹಿಡಿದುಕೊಂಡು ಮನೆಯಿಂದ ಹೊರಗೆ ಹೋಗಿದ್ದರು. ನನ್ನ ತಾಯಿ ಹೋದ ತಕ್ಷಣ ನಾನು ಮನೆಯ ಹೊರಗೆ ಹೋಗಿರಲಿಲ್ಲ. 10 ನಿಮಿಷದಿಂದ ಕಾಲು ಗಂಟೆ ವರೆಗೆ ನನ್ನ ತಾಯಿ ಬರಲಿಲ್ಲವಾದ್ದರಿಂದ ನಾನು ಮನೆಯಿಂದ ಹೊರಗೆ ಹೋಗಿದ್ದೆ. ಆ ದಿನ ಶಿವಪ್ರಕಾಶ್ ಇವರು ಅವರ eco sports ಕಾರಿನಲ್ಲಿ ನಮ್ಮ ಮನೆ ಬಳಿ ಬಂದಿದ್ದರು. ಆ ಕಾರನ್ನು ಪೋಲೀಸರು ವಶಕ್ಕೆ ಪಡೆದಿದ್ದರೋ ಇಲ್ಲವೊ ಗೊತ್ತಿಲ್ಲ. ಶಿವಪ್ರಕಾಶ್ ಇವರು ಕೆಲವೊಮ್ಮೆ ಡಿಯೋ ದ್ವಿಚಕ್ರ ವಾಹನದಲ್ಲಿ ಸಹ ನಮ್ಮ ಮನೆಗೆ ಬರುತ್ತಿದ್ದರು.

12. ನಾನು ಮನೆಯಿಂದ ಹೊರಗೆ ಬಂದಾಗ ನನ್ನ ತಾಯಿ ಮನೆಯಿಂದ 20 ಹೆಜ್ಜೆ ದೂರದಲ್ಲಿ ನಿಂತಿದ್ದರು. ಆ ಕಾಲಕ್ಕೆ ಶಿವಪ್ರಕಾಶ್ ಇವರು ನಮ್ಮ ಮನೆಯ ಎಡಗಡೆ ಇರುವ ನಂಜಪ್ಪ ಇವರ ಜಾಗದಲ್ಲಿ ನಿಂತಿದ್ದರು. ದಿಃ21.10.2021 ರಂದು ನಂಜಪ್ಪನವರ ಕಟ್ಟಡದ ಕೆಲಸ ನಡೆದಿತ್ತು ಎಂದರೆ ನಿಜ. ನಾನು ನೋಡಿದಾಗ ಶಿವಪ್ರಕಾಶ್ ಇವರ ಜೊತೆ ಯಾರೋ ಒಬ್ಬ ವ್ಯಕ್ತಿ ನಿಂತಿದ್ದರು. ಕತ್ತಲೆಯಾಗಿದ್ದರಿಂದ ಶಿವಪ್ರಕಾಶ್ ಇವರ ಜೊತೆ ನಿಂತಿದ್ದ ವ್ಯಕ್ತಿಯನ್ನು ಕಂಡುಹಿಡಿಯಲು ಆಗಿರಲಿಲ್ಲ ಎಂದರೆ ದೂರದಿಂದ ಆಗಿರಲಿಲ್ಲ. ಶಿವಪ್ರಕಾಶ್ ಮತ್ತು ಆ ಇನ್ನೊಬ್ಬ ವ್ಯಕ್ತಿ ಏನೆಂದು ಮಾತನಾಡುತ್ತಿದ್ದರು ಎಂದು ನನಗೆ ಕೇಳುತ್ತಿರಲಿಲ್ಲ ಎಂದರೆ ನಿಜ. ಆ ಕಾಲಕ್ಕೆ ನಾನು ಶಿವಪ್ರಕಾಶ್ ಇವರ ಬಳಿ ಹೋಗಿರಲಿಲ್ಲ ನನ್ನ ತಾಯಿಯ ಬಳಿ ಹೋಗಿದ್ದೆ. ಆ ದಿನ ನಾನು 2 ನಿಮಿಷ ಅಲ್ಲಿ ನಿಂತಿದ್ದೆ. ನನ್ನ ತಾಯಿಯನ್ನು ಮನೆಯ ಒಳಗೆ ಬಾ ಎಂದು ಕರೆದು ನಾನು ಮನೆ ಒಳಗೆ ಹೊಗಿದ್ದೆ. ಮನೆ ಒಳಗೆ ಹೋಗಿ 5 ನಿಮಿಷಕ್ಕೆ ಕಿರುಚುವ ಶಬ್ದ ಕೇಳಿತ್ತು. ನಂತರ ನಾನು ಹೊರಗಡೆ ಬಂದಾಗ ಅವರಿಗೆ ಹೊಡೆಯುವುದನ್ನು ನೋಡಿ ನನಗೆ ಭಯವಾಗಿತ್ತು. ಆ ಕಾಲಕ್ಕೆ ನಾನು ಬೇರೆ ಜನರನ್ನು ಕೂಗಿ ಕರೆದಿರಲಿಲ್ಲ. ಆ ಕಾಲಕ್ಕೆ ಮನೆಯ ಒಳಗಡೆ ನನ್ನ ಮೊಬೈಲ್ ಇತ್ತು. ಆ ಕಾಲಕ್ಕೆ ನಾನು ಮನೆಯ ಒಳಗಡೆ ಬಂದು ಪೋಲೀಸರಿಗೆ ಮತ್ತು ನನ್ನ ಸಂಬಂಧಿಕರಿಗೆ ಫೋನ್ ಮಾಡಿರಲಿಲ್ಲ. ನಾನು ಎರಡನೇ ಬಾರಿಗೆ ಮನೆಯಿಂದ ಹೊರಗೆ ಬಂದಾಗ ಶಿವಪ್ರಕಾಶ್ ಇವರು ಕಿರುಚುತ್ತಿದ್ದರು ನನ್ನ ತಾಯಿ ಬಿಡಿಸಲು ಹೋದಾಗ ನನ್ನ ತಾಯಿಗೆ ಏಟು ಬಿದ್ದಿತ್ತು, ನಾನು ಹತ್ತಿರಕ್ಕೆ ಹೋಗಿ ಬಿಡಿಸಿ ಕೊಳ್ಳಲು ಹೋದಾಗ ನನ್ನ ಕೈಗೆ ಪೆಟ್ಟಾಗಿತ್ತು. ಆ ಕಾಲಕ್ಕೆ ರಾತ್ರಿಯಾಗಿದ್ದರಿಂದ ಶಿವಪ್ರಕಾಶ್, ನನ್ನ ತಾಯಿ ಮತ್ತು ನನಗೆ ಹೊಡೆದಿದ್ದ ವ್ಯಕ್ತಿ ಯಾರೆಂದು ಸರಿಯಾಗಿ ಗುರುತಿಸಲು ಆಗಿರಲಿಲ್ಲ ಎಂದರೆ ನಿಜ. ಆ ಕಾಲಕ್ಕೆ ನಾನು ರಸ್ತೆಯಲ್ಲಿ ಹೊಗುವ ವಾಹನಗಳನ್ನು ನಿಲ್ಲಿಸುವ

ಪ್ರಯತ್ನ ಮಾಡಿರಲಿಲ್ಲ. ಶಾರದಮ್ಮನ ಗಂಡ ಪೋಲೀಸ್ ಇದುದ್ದರಿಂದ ಆ ಬಗ್ಗೆ ನೆನಪಾಗಿ ನಾನು ಅಲ್ಲಿಗೆ ಹೋಗಿದ್ದೆ. ನಾನು ತಬ್ಬಿಕೊಂಡು ಹಿಡಿದುಕೊಂಡ ವ್ಯಕ್ತಿಯನ್ನು ಕೆಳಗೆ ಬೀಳಿಸುವ ಪ್ರಯತ್ನ ಮಾಡಿರಲಿಲ್ಲ. ನಾನು ಆ ವ್ಯಕ್ತಿಯನ್ನು ತಬ್ಬಿಕೊಂಡಾಗ ಶಿವಪ್ರಕಾಶ್ ಮತ್ತು ನನ್ನ ತಾಯಿ ಒಂದೊಂದು ಕಡೆ ಬಿದ್ದು ಹೋಗಿದ್ದರು ಎಂದರೆ ನಿಜ.

13. ಶಾರದಮ್ಮನ ಮನೆ ಬಳಿ ಗೇಟ್ ಬೀಗ ಹಾಕಿದ್ದರಿಂದ ಗೇಟ್ ಬಳಿ 4-5 ನಿಮಿಷ ನಿಂತಿದ್ದೆ. ನಂತರ ಶಾರದಮ್ಮ ಗೇಟ್ ಬಳಿ ಬಂದು ಏನಾಯಿತು ಎಂದು ಕೇಳಿದ್ದರು. ಆಗ ಯಾರೋ ಬಂದು ಹೊಡೆಯುತ್ತಿದ್ದಾರೆ ಬನ್ನಿ ಎಂದು ಹೇಳಿದ್ದೆ. ಆ ರೀತಿ ಹೇಳಿದ 2-3 ನಿಮಿಷಕ್ಕೆ ಪೋನ್ ತಂದು ಕೊಟ್ಟಿದ್ದರು. ಮೊದಲಿಗೆ ನಾನು ಎರಡನೇ ಅಕ್ಕನಿಗೆ ಪೋನ್ ಮಾಡಿದ್ದೆ. ಆ ಕಾಲಕ್ಕೆ ನನ್ನ ಎರಡನೇ ಅಕ್ಕ ನಾಯ್ಡುನಗರದಲ್ಲಿ ವಾಸವಿದ್ದರು. ನಾಯ್ಡುನಗರದಿಂದ ನಮ್ಮ ಮನೆ 10-12 ಕಿ.ಮೀ ಆಗುತ್ತದೆ ಎಂದರೆ 10 ಕಿ.ಮೀ ಆಗುತ್ತದೆ. ಪೋನ್ ಕೊಟ್ಟ ನಂತರ ನಾನು 5 ನಿಮಿಷದವರೆಗೆ ಆ ಸ್ಥಳದಲ್ಲಿದ್ದೆ. ಆ ಕಾಲಕ್ಕೆ ಶಾರದಮ್ಮನ ಗಂಡ ಅಲ್ಲಿಯೇ ಇದ್ದರು. ನಂತರ ಅಲ್ಲಿಂದ ನಮ್ಮ ಮನೆ ಬಳಿ ಹೋಗಿದ್ದೆ. ಆ ಕಾಲಕ್ಕೆ ಶಾರದಮ್ಮನಿಗೆ ನಮ್ಮ ಮನೆ ಬಳಿ ಬರುವಂತೆ ಕರೆದಿದ್ದೆ ಆದರೆ ಅವರು ನನ್ನ ಅಕ್ಕನ ಜೊತೆ ಮಾತನಾಡುತ್ತಿದುದ್ದರಿಂದ ನಮ್ಮ ಮನೆ ಬಳಿಗೆ ಬಂದಿರಲಿಲ್ಲ. ಆ ಕಾಲಕ್ಕೆ ನಾನು ಮನೆ ಬಳಿ ಹೋದಾಗ ಅಲ್ಲಿ ಅಂದಾಜು 20-30 ಜನ ಸೇರಿದ್ದರು. ಆ ಕಾಲಕ್ಕೆ ಅಲ್ಲಿ ಸೇರಿದ್ದ ಜನರ ಹೆಸರು ಹೇಳಲು ಆಗುವುದಿಲ್ಲ. ನಾನು ಶಾರದಮ್ಮನ ಮನೆಯಿಂದ ಪುನಃ ನಮ್ಮ ಮನೆ ಬಳಿ ಹೊಗುವಷ್ಟರಲ್ಲಿ ಹೊಡೆದಿದ್ದ ವ್ಯಕ್ತಿ ಅಲ್ಲಿಂದ ಹೊರಟು ಹೋಗಿದ್ದರು. ಆ ಕಾಲಕ್ಕೆ ಅಲ್ಲಿದ್ದ 2-3 ಜನರು ಶಿವಪ್ರಕಾಶ್ ಇವರ ಮಗನೇ ಅವರಿಗೆ ಹೊಡೆದಿದ್ದಾನೆ ಎಂದು ಹೇಳಿದ್ದರು. ಆಗ ಪೋಲೀಸರು ಅವರ ಮಗನ ಹೆಸರು ಏನು ಎಂದು

ಕೇಳಿದಾಗ ನಾನು ಸಾಗರ್ ಎಂದು ಹೇಳಿದ್ದೆ. ಆ ದಿನ ಅಲ್ಲಿ ಸೇರಿದ್ದ ಜನ ಹೇಳಿದ್ದ ಆದಾರದ ಮೇರೆಗೆ ಸಾಗರ್ ನು ಶಿವಪ್ರಕಾಶ್ ಮತ್ತು ನನ್ನ ತಾಯಿಗೆ ಹೊಡೆದಿದ್ದಾನೆ ಎಂದು ಪೋಲೀಸರ ಮುಂದೆ ಹೇಳಿದ್ದೆ ಎಂದರೆ ನಿಜ. ಶಿವಪ್ರಕಾಶ್ ಇವರಿಗೆ ಒಟ್ಟು ಇಬ್ಬರು ಮಕ್ಕಳು. ಅವರೆಂದರೆ ಸಾಗರ್ ಮತ್ತು ನವ್ಯಶ್ರೀ ಇರುತ್ತಾರೆ. ಶಿವಪ್ರಕಾಶ್ ಇವರ ಮಕ್ಕಳ ಹೆಸರನ್ನು ಶಿವಪ್ರಕಾಶ್ ಇವರೇ ನನಗೆ ಹೇಳಿದ್ದರು.

14. ನಾನು ಶಾರದಮ್ಮನ ಮನೆಯಿಂದ ನಮ್ಮ ಮನೆ ಬಳಿ ಹೋದ 5 ನಿಮಿಷಕ್ಕೆ ಪೋಲೀಸರು ಅಲ್ಲಿಗೆ ಬಂದಿದ್ದರು. ನನ್ನ ಮೊದಲ ಭಾವ ಮತ್ತು ಮೊದಲ ಅಕ್ಕ ಅಲ್ಲಿಗೆ ಮೊದಲಿಗೆ ಬಂದಿದ್ದರು. ಅವರು ಬಂದ ಕೂಡಲೇ ಪೋಲೀಸರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಅವರ ಕಾರಿನಲ್ಲಿ ಕಳುಹಿಸಿದ್ದರು. ಆ ಕಾಲಕ್ಕೆ ನನಗೆ ಏಟು ಬಿದ್ದಿದ್ದರಿಂದ ಮತ್ತು ನನ್ನ ತಾಯಿ ಮರಣಹೊಂದಿದ್ದರಿಂದ ತುಂಬಾ ಗಾಬರಿಯಾಗಿತ್ತು ಎಂದರೆ ನಿಜ. ಆ ಕಾಲಕ್ಕೆ ನಾನು ಕಾಮಾಕ್ಷಿ ಆಸ್ಪತ್ರೆಯಲ್ಲಿ *5* ನಿಮಿಷ ಇದ್ದೆ. ಅಲ್ಲಿ ಬ್ಯಾಂಡೇಜ್ ಹಾಕಿ ಜೆ.ಎಸ್.ಎಸ್ ಆಸ್ಪತ್ರೆಗೆ ಕಳುಹಿಸಿದ್ದರು. ಮರುದಿನ ಮ.*4* ಗಂಟೆಗೆ ನನ್ನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದ್ದರು. ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ. ಘಟನೆ ಮರುದಿನ ನನ್ನ ಹೇಳಿಕೆ ಪಡೆದಿದ್ದರು. ದಿಃ*26.10.2021* ರಂದು ಪುನಃ ನನ್ನ ಹೇಳಿಕೆ ಪಡೆದಿದ್ದರು. ನಂತರ ದಿಃ*30.10.2021* ರಂದು ಕೋರ್ಟ್ ನಲ್ಲಿ ಹೇಳಿಕೆ ಕೊಟ್ಟಿದ್ದೆ. ಕೋರ್ಟ್ ನಲ್ಲಿ ಹೇಳಿಕೆ ಕೊಡುವ ಮೊದಲು ಆ ದಿನ ನನ್ನನ್ನು ಪೋ.ಠಾಣೆ ಬಳಿ ಕರೆದಿದ್ದರು ಎಂದರೆ ನಿಜ. ಆ ಕಾಲಕ್ಕೆ ಪೋಲೀಸರು ನನ್ನ ಮೊದಲಿನ ಹೇಳಿಕೆಯನ್ನು ಕೊಟ್ಟು ಓದಲು ಹೇಳಿದ್ದರು ಎಂದರೆ ನಿಜ. ಆ ಹೇಳಿಕೆ ಆಧಾರದ ಮೇಲೆ ನಾನು ಕೋರ್ಟ್ ನಲ್ಲಿ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ಪೋಲೀಸರ

ಮುಂದೆ ಕೊಟ್ಟ ಹೇಳಿಕೆ ಆಧಾರದ ಮೇಲೆ ಈ ಕೋರ್ಟ್ ನಲ್ಲಿ ಮುಖ್ಯ ವಿಚಾರಣೆಯಲ್ಲಿ ಸಾಗರ್ ನೇ ಹೊಡೆದಿದ್ದ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ಶಿವಪ್ರಕಾಶ್ ಇವರು ದ್ವಿಚಕ್ರ ವಾಹನವನ್ನು ಆಗಾಗ ತರುತ್ತಿದ್ದರಿಂದ ಅದೇ ವಾಹನದ ಸಂಖ್ಯೆಯನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ. ಅಲ್ಲಿ ಸೇರಿದ್ದ ಜನರು ಸಾಗರ್ ನೇ ಹೋಡೆದಿದ್ದಾನೆ ಎಂದು ಹೇಳಿದ್ದರಿಂದ ಆ ವಾಹನದ ಸಂಖ್ಯೆಯನ್ನು ಹೇಳಿದ್ದೇನೆ.

*15.* ಶಿವಪ್ರಕಾಶ್ ಇವರು ನಮ್ಮ ಮನೆಗೆ ಸಹಾಯ ಮಾಡುತ್ತಾರೆ ಎನ್ನುವ ಕಾರಣಕ್ಕೆ ನಮಗೂ ಮತ್ತು ಅವರ ಕುಟುಂಬದವರಿಗೂ ಯಾವತ್ತು ಮಾತುಕತೆ ಅಥವಾ ಜಗಳ ನಡೆದಿರಲಿಲ್ಲ ಎಂದರೆ ನಿಜ. ಆಸ್ಪತ್ರೆಯಲ್ಲಿ ನನ್ನ ಬಟ್ಟೆಗಳನ್ನು ಪಡೆದಿರಲಿಲ್ಲ. ನಿ.ಪಿ-*12* ದಾಖಲೆಯಲ್ಲಿ ಏನು ಬರೆದಿದೆ ಎಂದು ಈಗ ಹೇಳಲು ಆಗುವುದಿಲ್ಲ ಎಂದರೆ ನಿಜ. ನನ್ನ ಬಟ್ಟೆಗಳನ್ನು ಪ್ಯಾಕ್ ಮಾಡಿ ಸೀಲ್ ಮಾಡಿದ್ದರು. ನನಗೆ ಮಾದರಿ ಸೀಲ್ ಕೊಟ್ಟಿರಲಿಲ್ಲ. ಆ ದಿನ ಅಲ್ಲಿ ಸೇರಿದ್ದ ಜನರು ಶಿವಪ್ರಕಾಶ್ ಇವರ ಮಗ ಹೊಡೆದಿದ್ದಾನೆ ಎಂದು ಹೇಳಿದ್ದರಿಂದ ನಾನು ಸಾಗರ್ ನ ಹೆಸರನ್ನು ನನ್ನ ಅಕ್ಕ, ಭಾವ ಮತ್ತು ಪೋಲೀಸರಿಗೆ ಹೇಳಿದ್ದೆ ಎಂದರೆ ನಿಜ. ಸಾಗರ್ ಎಂದು ಹೆಸರು ಹೇಳಿದ್ದರಿಂದ ಮತ್ತು ನನಗೆ ಶಿವಪ್ರಕಾಶ್ ಇವರ ಗಾಡಿ ಸಂಖೆ ಮೊದಲೇ ಗೊತ್ತಿದ್ದರಿಂದ ಆ ವಾಹನದಲ್ಲಿ ಬಂದಿರಬಹುದು ಎಂದು ಆ ಗಾಡಿ ಸಂಖ್ಯೆ ಹೇಳಿದ್ದೆ ಎಂದರೆ ನಿಜ. ನಾನು ಕೋರ್ಟ್ ಮುಂದೆ ಇರುವ ಆರೋಪಿತ ಸಾಗರ್ ನನ್ನು ಕೋರ್ಟ್ ನಲ್ಲಿಯೇ ಮೊದಲ ಬಾರಿಗೆ ನೋಡಿದ್ದೇನೆ ಎಂದರೆ ನಿಜ. ಆ ದಿನ ಆರೋಪಿತ ನಮ್ಮ ಮನೆ ಬಳಿ ಬಂದಿರಲಿಲ್ಲವಾದರೂ ಅಲ್ಲಿ ಸೇರಿದ್ದ ಜನ ಹೇಳಿದ್ದರಿಂದ ಸಾಗರ್ ಬಂದಿದ್ದ ಎಂದು ಹೇಳುತ್ತಿದ್ದೇನೆ ಎಂದರೆ ನಿಜ.

**ಈ ವೇಳೆಗೆ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸದರಿ ವಿನಂತಿಗೆ ಆರೋಪಿತನ ಪರ ವಕೀಲರು ತಕರಾರು ವ್ಯಕ್ತ ಪಡಿಸಿದ್ದು ಆ ಕುರಿತು ವಾದ ವಿವಾದಗಳನ್ನು ಕೇಳಲು ಸಾಕ್ಷಿದಾರರ ಮುಂದುವರೆದ ವಿಚಾರಣೆಯನ್ನು ಮುಂದೂಡಲಾಯಿತು**.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*